88.	ರೋಣ	
89.	ಧಾರವಾಡ	
90.	ಹಾನಗಲ್	
91.	ರಾಣೆಬೆನ್ನೂರು	
92.	ಹಡಗಲಿ	
93.	ಯಾದಗಿರಿ	

ಭಾಲ್ಕಿ ಕ್ಷೇತ್ರದಲ್ಲಿ ಪರ್ಕ್ಯುಲೇಶನ್ ಟ್ಯಾಂಕ್ ಹಾಗೂ ಬ್ಯಾರೇಜ್ ಕಾಮಗಾರಿ

5(24): ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಭಾಲ್ಕಿ ವಿಧಾನ ಸಭಾ ಕ್ಷೇತ್ರದಲ್ಲಿ ಸಣ್ಣ ನೀರಾವರಿ ಇಲಾಖೆಯ ವತಿಯಿಂದ ನಿರ್ಮಿಸಲಾಗುತ್ತಿರುವ 9 ಪರ್ಕ್ಯುಲೇಶನ್ ಟ್ಯಾಂಕ್ ಹಾಗೂ ಬ್ಯಾರೇಜಿನ ಕಾಮಗಾರಿ ಈಗ ಯಾವ ಹಂತದಲ್ಲಿದೆ;

ಆ) ಇವುಗಳಿಗೆ ಯಾವಾಗ ಮಂಜೂರಾತಿಯನ್ನು ನೀಡಲಾಯಿತು? ಇವುಗಳ ಅಂದಾಜು ವೆಚ್ಚವೆಷ್ಟು; ಇವುಗಳ ಕಾಮಗಾರಿಗಳನ್ನು ಎಂದು ಪ್ರಾರಂಭಿಸಲಾಯಿತು? ಇಲ್ಲಿಯವರೆವಿಗೂ ಇವುಗಳ ನಿರ್ಮಾಣ ಕಾಮಗಾರಿಗಳಿಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ;

ಇ) ಈ ಕಾಮಗಾರಿಗಳು ಮಂದಗತಿಯಲ್ಲಿ ಸಾಗುತ್ತಿರುವುದು ನಿಜವಲ್ಲವೇ; ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು; ಈ ಕಾಮಗಾರಿಗಳನ್ನು ಶೀಘ್ರಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು):

ಅ) & ಆ) ವಿವರಗಳನ್ನು ಅನುಬಂಧ –1 ರಲ್ಲಿ ನೀಡಲಾಗಿದೆ

ಇ) ಈ ಕಾಮಗಾರಿಗಳು ಮಂದಗತಿಯಲ್ಲಿ ಸಾಗಲು ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ವಿಳಂಬವೇ ಪ್ರಮುಖ ಕಾರಣವಾಗಿದೆ. ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವ ದೃಷ್ಟಿಯಿಂದ ಕಂದಾಯ ಇಲಾಖೆಯನ್ನು ಸಂಪರ್ಕಿಸಿ ಭೂಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕ್ರಮ ಕೈಗೊಳ್ಳ ಲಾಗುವುದು.

ಅನುಬಂಧ–I

ಕ್ರ. ಸಂ.	ಕಾಮಗಾರಿ ಹೆಸರು	ಮಂಜೂರಾತಿ ವರ್ಷ	ಅಂದಾಜು ಮೊತ್ತ	ಪ್ರಾರಂಭದಿಂದ ಇದುವರೆಗಿನ ವೆಚ್ಚ ಡಿಸೆಂಬರ್–2010 ರ ವರೆಗೆ)	ಪ್ರಸ್ತುತ ಹಂತ
ಇಂಗು ಕೆರೆಗಳು					
1.	ಹುದನೂರ	2008–09	50.00	10.88	ಗುತ್ತಿಗೆ ನಿಗದಿ ಪಡಿಸಲಾಗಿದೆ. ಭೂ ಮಾಲೀಕರ ಆಕ್ಷೇಪದಿಂದ ಕೆಲಸ ಪ್ರಾರಂಭಿಸಲಾಗಿಲ್ಲ. ಭೂ ಮಾಲೀಕರ ಒಪ್ಪಿಗೆ ಪಡೆದು ಕೆಲಸ ಪ್ರಾರಂಭಿಸುವ ಪ್ರಯತ್ನ ಮಾಡಲಾಗುತ್ತಿದೆ. ರೂ. 10.88 ಲಕ್ಷ ಭೂ ಸ್ವಾಧೀನಕ್ಕಾಗಿ ಮುಂಗಡ ಠೇವಣಿ ಮಾಡಲಾಗಿದೆ. ಮಾರ್ಚ್ 2012ರ ವರಗೆ ಪೂರ್ಣಗೊಳಿಸುವ ಗುರಿ ಇದೆ.
2.	ಕೆರೂರ	2006–07	30.00	10.02	ಕಾಮಗಾರಿ ಪ್ರಾರಂಭವಾಗಿ ಭಾಗಶಃ
3.	ಬಾಡೋಳಗಾ	2006–07	30.00	21.04	ನಿರ್ವಹಿಸಿದ ನಂತರ ಭೂ ಮಾಲೀಕರ ಆಕ್ಷೇಪದಿಂದ ನಿಲ್ಲಿಸಲಾಯಿತು. ಭೂ ಸ್ವಾಧೀನದ ಮುಂಗಡ ಠೇವಣಿ ಮಾಡಿ ಮತ್ತೆ ಕೆಲಸವನ್ನು ಪ್ರಾರಂಭಿಸಲಾಗಿದೆ. ಆದರೆ, ಭೂ ಪರಿಹಾರ ಧನ ನೀಡದ ಕಾರಣ ಕೆಲಸ ಮಂದಗತಿಯಿಂದ ಸಾಗಿದೆ. ಮಾರ್ಚ್–2011 ರಲ್ಲಿ ಪೂರ್ಣ ಮಾಡುವ ಗುರಿ ಇದೆ.
4.	ಮದಕಟ್ಟಿ	2006–07	30.00	9.78	ಕಾಮಗಾರಿ ಪ್ರಾರಂಭವಾಗಿ ಭಾಗಶಃ ನಿರ್ವಹಿಸಿದ ನಂತರ ಭೂ ಮಾಲೀಕರ ಆಕ್ಷೇಪದಿಂದ ನಿಲ್ಲಿಸಲಾಯಿತು. ಭೂ ಸ್ವಾಧೀನದ ಮುಂಗಡ ಠೇವಣಿ ಮಾಡಿದ ನಂತರ ಭೂ ಸ್ವಾಧೀನ ನಡುವಳಿ ಮುಂದುವರೆಸಿ ಮತ್ತೆ ಕೆಲಸ ಪ್ರಾರಂಭವಾಯಿತು. ಆದರೆ, ಭೂ ಪರಿಹಾರ ಧನ ನೀಡುವವರೆಗೆ ಕೆಲಸ ಪ್ರಾರಂಭಿಸಲು ಭೂಮಾಲೀಕರು ತಡೆ ಒಡ್ಡಿದ್ದಾರೆ. ಆದರೂ ಭೂ ಮಾಲೀಕರನ್ನು ಒಪ್ಪಿಸಿ ಕೆಲಸ ಮುಂದುವರೆಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಜೂನ್ 2011ರ ವರೆಗೆ ಮುಗಿಸುವ ಗುರಿ ಇದೆ.
5.	ಅಟ್ಟಗ್ಗಾ	2002–03	35.00	18.38	ಕಾಮಗಾರಿ 2002–03ರಲ್ಲಿ ಮಂಜೂರಾತಿ ಪಡೆದ ಮೇಲೆ ಗುತ್ತಿಗೆ ನಿಗದಿ ಪಡಿಸಲಾಯಿತು. ಆದರೆ ಭೂ ಸ್ವಾಧೀನ ತೊಂದರೆಯಿಂದ ಕೆಲಸ 2006–07 ರವರೆಗೆ ಪ್ರಾರಂಭಿಸಲಾಗಿಲ್ಲ. ಭೂ ಪರಿಹಾರದ ರೂ. 13.31 ಲಕ್ಷ ಮುಂಗಡ ಠೇವಣಿ ಮಾಡಿ 2007–08 ರಲ್ಲಿ ಗುತ್ತಿಗೆದಾರರಿಗೆ ಕೆಲಸ ಪ್ರಾರಂಭಿಸಲು ಸೂಚಿಸಲಾಯಿತು. ಆದರೆ ಹಳೆಯ ದರಗಳಿಂದ ಕೆಲಸ ಮಾಡಲು

					ಆಗುವುದಿಲ್ಲವೆಂದು ಗುತ್ತಿಗೆದಾರರು ನಿರಾಕರಿಸಿದ ಪ್ರಯುಕ್ತ ಹಳೆಯ ಗುತ್ತಿಗೆಯನ್ನು ನಿಯಮಾನುಸಾರ ರದ್ದು ಪಡಿಸಿ ಹೊಸ ಟೆಂಡರ್ ನಡುವಳಿ ಮೂಲಕ ಹೊಸ ಗುತ್ತಿಗೆ ನಿಗದಿಪಡಿಸಿ ಮಾರ್ಚ್ 2010 ರಲ್ಲಿ ಕಾಮಗಾರಿ ಪ್ರಾರಂಭಿಸಲಾಯಿತು. ಒಡ್ಡಿನ ವಾಯಾ ತುಂಬುವ ಹಂತದಲ್ಲಿ ಮಳೆಯಿಂದ ನೀರು ತುಂಬಿದ ಕಾರಣ ಕೆಲಸ ಮುಂದುವರೆದಿಲ್ಲ. ಈಗ ಮನರ್ ಪ್ರಾರಂಭಿಸಿ, ಮಾರ್ಚ್-2011 ರಲ್ಲಿ ಪೂರ್ಣಗೊಳಿಸುವ ಗುರಿ ಇದೆ.
6.	ಡೋಣಗಾಪೂರ	2007–08	122.00	0.75	ಕಾಮಗಾರಿಗೆ ಗುತ್ತಿಗೆ ನಿಗದಿ ಪಡಿಸಲಾಗಿದೆ. ಭೂ ಮಾಲೀಕರ ಆಕ್ಷೇಪಣೆಯಿಂದ ಕೆಲಸ ಪ್ರಾರಂಭಿಸ ಲಾಗಿಲ್ಲ. ಭೂ ಸ್ವಾಧೀನ ಪ್ರಸ್ತಾವ ಸಲ್ಲಿಸಲಾಗಿದೆ. ಆದರೆ ಮುಂಗಡ ಹಣ ಠೇವಣಿ ಮಾಡಬೇಕಾಗಿರುವ ಕಾರಣ ನಡುವಳಿ ಮುಂದುವರೆಯುತ್ತಿಲ್ಲ. ಅನುದಾನದ ಲಭ್ಯತೆಯನ್ನು ಆಧರಿಸಿ ಮುಂಗಡ ಠೇವಣಿ ಮಾಡಲಾಗುವುದು.
7.	ಜಮಖಂಡಿ	2007–08	80.00	1.32	
8.	ಖಾನಾಪೂರ	2008–09	30.00	9.73	ಕಾಮಗಾರಿ ಪೂರ್ಣಗೊಂಡಿದೆ.
9.	ಶ್ರೀಮಳಿ	2008–09	40.00	43.17	ಮೇ-2010ರಲ್ಲಿ ಪೂರ್ಣಗೊಂಡಿತ್ತು. ಜುಲೈ-2010 ರಲ್ಲಿ ಬಿದ್ದ ಧಾರಿ ಮಳೆಯಿಂದ ಹೆಚ್ಚಿನ ನೀರು ನುಗ್ಗಿ ಒಡೆದುಹೋಗಿದೆ. ಇದನ್ನು ದುರಸ್ತಿ ಪಡಿಸುವ ಪ್ರಸ್ತಾವ ಪ್ರವಾಹ ಹಾನಿ ಪರಿಹಾರ ಆಡಿಯಲ್ಲಿ ಜಿಲ್ಲಾಧಿಕಾರಿಗಳಿಗೆ ಸಲ್ಲಿಸಲಾಗಿದೆ.
ಬ್ಯಾರೇಜ/ಬಿ.ಸಿ.ಬಿ					
1.	ಭಾಟಸಾಂಗವಿ ಬಿ.ಸಿ.ಬಿ.	2007–08	170.00	54.83	ಕಾಮಗಾರಿಯ ಅಂದಾಜು ಪಟ್ಟಿ 2007–08 ರಲ್ಲಿ 4702 ಪ್ರಧಾನ ಕಾಮಗಾರಿ ಆಡಿಯಲ್ಲಿ ಮಂಜೂರಾತಿ ನೀಡಿದೆ. ತದನಂತರ 2008–09 ರಲ್ಲಿ ಎ.ಐ.ಬಿ.ಪಿ. ಯೋಜನೆಯಲ್ಲಿ ಗುತ್ತಿಗೆ ನಿಗದಿಪಡಿಸಿ ಮಾರ್ಚ್ 2010 ರಲ್ಲಿ ಕೆಲಸ ಪ್ರಾರಂಭಿಸಲಾಯಿತು. ಆದರೆ ವಾಯಾ ಕಾಂಕ್ರೀಟ್ ತುಂಬುವ ಕೆಲಸ ಮಾಡಿದ ಮೇಲೆ ಕಾರಂಜಾ ಯೋಜನೆಯಿಂದ ನೀರು ಬಿಡುಗಡೆ ಮಾಡಿದ್ದರಿಂದ ಹಾಗೂ ಆಮೇಲೆ ಮಳೆಗಾಲ ಪ್ರಾರಂಭವಾಗಿದ್ದರಿಂದ ಸ್ಥಳದಲ್ಲಿಯೆ ನೀರಿನ ಪ್ರವಾಹ ಹೆಚ್ಚಾಗಿ ಕಾಮಗಾರಿ ಮುಂದುವರೆಯಲು ಸಾಧ್ಯವಾಗಿಲ್ಲ. ಈಗ ಕೆಲಸ ಮನಃ ಪ್ರಾರಂಭಿಸ ಬೇಕಾಗಿದೆ.
2.	ಡಾವರಗಾಂವ ಮರೂರ ಗ್ರಾಮದ ಹತ್ತಿರ ಬಿ.ಸಿ.ಬಿ	2009–10	155.00	0.00	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ.